ಅಂದು ಬೆಳಿಗ್ಗೆ ತನ್ನ ಮನೆಯ ದೇವರುಗಳೊಡನೆ ಶ್ರೀನಿವಾಸ ಸಿದ್ದೇಶ್ವರಕ್ಕೆ ಬಂದು ತಲುಪಿದ. ರಸ್ತೆಯಿಂದ ಸ್ವಲ್ಪ ಒಳಕ್ಕೆ ಹೋದರೆ ಅಲ್ಲೊಂದು ದೇವಾಲಯವಿದೆ. ಅಲ್ಲಿದ್ದ ಭಟ್ಟರಿಗೆ ಕೈ ಮುಗಿದು ಅವರ ಮನೆಯ ಬಾವಿಕಟ್ಟೆಯಲ್ಲಿ ಮಿಂದ. ಮೈ ಒರೆಸಿಕೊಂಡು ಒದ್ದೆ ಬಟ್ಟೆಯಲ್ಲೇ ಸಿದ್ದೇಶ್ವರ ದೇವಾಲಯದ ಶಿವಲಿಂಗದೆದುರು ಅಡ್ಡಬಿದ್ದ. ಆಮೇಲೆ ಸ್ವಲ್ಪ ದೂರ ಹೋಗಿ ಹಿತ್ತಿಲಿನಿಂದಾಚೆ ಬಂದು ಅಶ್ವತ್ಥ ಮರದಡಿ ಕುಳಿತು ಮನೆದೇವರ ಮೂಟೆ ಬಿಚ್ಚಿದ. ಗಿಂಡಿಯಲ್ಲಿ ತಂದ ನೀರಿನಿಂದ ದೇವರನ್ನು ತೊಳೆದು ಕುಂಕುಮ, ಅರಿಸಿನ ಹಚ್ಚಿ ಹತ್ತಿರದಲ್ಲೇ ಇದ್ದ ಹೂಗಿಡಗಳಿಂದ ಒಂದೆರಡು ಹೂವು ತಂದು ಅವನ ಪಾದಗಳಿಗರ್ಪಿಸಿ ಕಣ್ಣು ಮುಚ್ಚಿ ಕುಳಿತ:

''ಓ ಮನೆ ದೇವರೇ, ಓ ಆಂಜನೇಯಾ, ಹೇ ಪುಣ್ಯಾತ್ಮಾ, ಈ ಊರು ನಿನಗೆ ಒಪ್ಪಿಗೆಯೋ?''

ದೇವರು ಮಾತಾಡಲಿಲ್ಲ.

''ಅಲ್ಲ ಮಾರಾಯಾ, ನೀನು ಹೀಗೇ ಸುಮ್ಮನಿದ್ದರೆ ನಾನು ಏನಂತ ಅರ್ಥ ಮಾಡಿಕೊಳ್ಳಲಿ? ಈ ಊರು ನಿನಗೆ ಒಪ್ಪಿಗೆಯೋ?''

ದೇವರು ಮಾತಾಡಲಿಲ್ಲ.

''ನೋಡು, ಅರ್ಧ ಗಂಟೆ ಕಾಲಾವಕಾಶ ಕೊಡುತ್ತೇನೆ. ಚೆನ್ನಾಗಿ ಯೋಚಿಸಿ ಹೇಳು. ಇನ್ನೂ ಎಷ್ಟು ದಿನ ನಿನ್ನನ್ನು ಹೊತ್ತುಕೊಂಡು ಹೀಗೆ ಊರೂರು ಅಲೆಯಲಿ? ಕರುಣಾಕರ ಎನ್ನುತ್ತಾರಲ್ಲಪ್ಪಾ ನಿನ್ನನ್ನು!''

ಶ್ರೀನಿವಾಸ ಕಣ್ಣೊರೆಸಿಕೊಳ್ಳುತ್ತ ಕುಳಿತ. ಇದೇ ಕರಾವಳಿಯ ಒಂದು ಸನಿಹದ ಹಳ್ಳಿಯಿಂದ ಅವನು ಎದ್ದುಬಂದಿದ್ದಾನೆ. ಹದಿಹರಯದ ಹುಡುಗನಿಗೆ ಅಪ್ಪ ಇಲ್ಲ, ಅಮ್ಮ ಇಲ್ಲ. ''ನಿನ್ನ ಪಾಲಿಗೆ ಬಂದಿರುವುದು ಇದಿಷ್ಟು. ಏನು ಬೇಕಾದರೂ ಮಾಡಿಕೋ. ಮನೆಯಿಂದ ಹೊರಗೆ ಬೀಳು'' ಎಂದು ಚಿಕ್ಕಪ್ಪಂದಿರು ಒಂದು ದಿನ ಬೆಳಿಗ್ಗೆ ಅವನನ್ನು ಮನೆಯಿಂದ ಹೊರಗೆ ದಬ್ಬಿದರು. ಚಿಕ್ಕಂದಿನಿಂದಲೂ ದೇವರ ಪೂಜೆ ಎಂದರೆ ಜೀವ ಶ್ರೀನಿವಾಸನಿಗೆ. ಅವನ ಪಾಲಿಗೆ ಚಿಕ್ಕಪ್ಪಂದಿರು ಕೊಟ್ಟಿದ್ದು ಮನೆಯ ದೇವರ ಪೀಠದಲ್ಲಿದ್ದ ಕೆಲವು ಮೂರ್ತಿಗಳು, ಪಟಗಳನ್ನು. ಇವನಿಗೆ ಚಿಕ್ಕಂದಿನಲ್ಲಿ ಜಾತ್ರೆಯಲ್ಲಿ ಅಮ್ಮ ತೆಗೆಸಿಕೊಟ್ಟ ಆಂಜನೇಯನ ಮೂರ್ತಿಯೂ ಈ ಆಸ್ತಿಯಲ್ಲಿ ಸೇರಿತ್ತು. ನಡೆಯುತ್ತ ಗುಡ್ಡಗಳನ್ನಿಳಿದು ಸಿದ್ದೇಶ್ವರದವರೆಗೆ ಬಂದ. ದೇವರು ಹ್ಞೂ ಎಂದಲ್ಲಿ ನೆಲೆಸುವೆನೆಂದು ಅವನ ತೀರ್ಮಾನ. ದೇವರು ಒಲ್ಲೆನೆಂದ ಹಾಗೆ ಅವನಿಗೆ ತೋರುತ್ತದೆ. ಎಲ್ಲ ಮೂರ್ತಿಗಳನ್ನೂ ಒಟ್ಟುಗೂಡಿಸಿ ಗಂಟಿನಲ್ಲಿ ಬಿಗಿದು ಚೀಲ ಹೊತ್ತು ಮುಂದಿನ ಊರಿಗೆ ಪಯಣ. ಹೀಗೆ ಕಳೆದ ಒಂದು ವಾರದಿಂದ ಹುಡುಗ ಅಲೆಯುತ್ತಲೇ ಇದ್ದಾನೆ. ಹುಟ್ಟೂರಿನಿಂದ ಈ ದೇವರುಗಳೇ ಅಲ್ಲವೇ ನನ್ನನ್ನು ಹೊರಗೆ ಕರೆದುಕೊಂಡು ಬಂದದ್ದು? ಅಂದ ಮೇಲೆ ನೀವೇ ಹೇಳಿರಿ, ನೀವೂ, ನಾನೂ ಎಲ್ಲಿರಬೇಕೆಂದು ನಿರ್ಧರಿಸಿರಿ ಎಂದು ಆಂಜನೇಯನೊಡನೆ ಶ್ರೀನಿವಾಸನ ಹಟ. ಕೆಲವೊಮ್ಮೆ ಶ್ರೀನಿವಾಸ ಅಳುವಾಗ ಹನುಮಂತನೂ ಮಂಕಾಗುವನು.

ರಾಮಾಯಣದಲ್ಲಿ ಅಷ್ಟೊಂದು ಸಾಹಸಗೈದ ಹನುಮಂತ ಈಗ ಮಂಕಾಗುವುದೇಕೆ? ಅವನಿಗೆ ವಯಸ್ಸಾಯಿತೇ? ಕಲಿಯುಗದ ಪ್ರಭಾವವೇ? ಶ್ರೀನಿವಾಸನಿಗೆ ಅರ್ಥವಾಗದು. ದೇವರ ಸಾಮರ್ಥ್ಯಕ್ಕೆ ಎಲ್ಲೆಯೇ ಇಲ್ಲ ಎಂದು ಅವನ ಅಮ್ಮ ಹೇಳಿಕೊಟ್ಟಿದ್ದಾಳೆ. ಇಷ್ಟು ಅಮೂಲ್ಯ ದೇವತಾಮೂರ್ತಿಗಳನ್ನು ನನ್ನ ಪಾಲಿಗೊಪ್ಪಿಸಿ ಚಿಕ್ಕಪ್ಪಂದಿರು ಬರೀ ತೋಟ, ಮನೆ ತಮ್ಮ ಪಾಲಿಗೆ ಇಟ್ಟುಕೊಂಡರಲ್ಲ ಎಂದು ಶ್ರೀನಿವಾಸನಿಗೆ ಅಚ್ಚರಿ ಅನಿಸುವುದು. ಅಂದು ಬೆಳಿಗ್ಗೆ ಎಲ್ಲರ ಜೊತೆ ದೋಸೆ ಬೆಲ್ಲ ತಿಂದು ಚಾ ಕುಡಿದವನಿಗೆ ಮುಂದೆ ಕೆಲವೇ ನಿಮಿಷಗಳಲ್ಲಿ ಸನ್ನಿವೇಶವೇ ಬೇರೆಯಾಗುವುದೆಂದು ತಿಳಿದಿರಲಿಲ್ಲ. ಆಸ್ತಿ ಆದ ಮೇಲೆ ಹಿರಿಯ ಚಿಕ್ಕಪ್ಪ ಕರೆದ: